UASB Library
Newspaper Clippings
Friday 25-02-2022 Pg .1
Jai Kisan

ಕೃಷಿಯಲ್ಲಿ ಡ್ರೋನ್ ಬಳಕೆಗೆ ವಿಜ್ಞಾನಿಗಳು

ಬೆಂಗಳೂರು: ಕೃಷಿಯಲ್ಲಿ ಡ್ರೋನ್ ತಂತ್ರಜ್ಞಾನ ಬಳಕೆ ಕುರಿತು ಸಂಶೋಧನೆಗೆ ವಿಜ್ಞಾನಿಗಳ ತಂಡ ರಚಿಸಲು ಕೃಷಿ ಇಲಾಖೆ ಮುಂದಾಗಿದೆ. ಕೃಷಿ ಅಭಿವೃದ್ಧಿಗೆ ಪೂರಕವಾಗಿ ನೂತನ ಪದ್ಧತಿಗಳನ್ನು ಅಭಿವೃದ್ಧಿ ಪಡಿಸಿ, ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲು ವಿಜ್ಞಾನಿಗಳ ತಂಡ ರಚನೆ ಮಾಡಲು ಕೃಷಿ ವಿವಿಗಳು ಯೋಜನಾ ವರದಿ ನೀಡುವಂತೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಸೂಚಿಸಿದ್ದಾರೆ. ವಿಕಾಸಸೌಧದಲ್ಲಿ ನಡೆದ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಉನ್ನತಾಧಿಕಾರದ ಸಮಿತಿಯ ಸಭೆಯಲ್ಲಿ ಈ ಸೂಚನೆ ನೀಡಿದರು. ರೈತರ ಆದಾಯ ದ್ವಿಗುಣಗೊಳಿಸಲು ಸೆಕೆಂಡರಿ ಕೃಷಿಗೆ ಒತ್ತು ನೀಡುವುದರ ಜತೆಗೆ ಸೆಕೆಂಡರಿ ಕೃಷಿ ಕುರಿತು ರಾಜ್ಯದ ಎಲ್ಲ ಕೃಷಿ ವಿಶ್ವವಿದ್ಯಾಲಯಗಳಲ್ಲಿರುವ ನೂತನ ತಾಂತ್ರಿಕತೆಗಳನ್ನು ಒಂದೇ ಸೂರಿನಡಿ ರೈತರಿಗೆ ಲಭ್ಯವಾಗುವಂತೆ ಇನ್ನು ಮಾಹಿತಿ/ತರಬೇತಿ ನೀಡಲು ತಿಳಿಸಲಾಯಿತು. ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅಭಿವೃದ್ಧಿಪಡಿಸಿರುವ ಬೆಳೆಗಳ ತಳಿಗಳನ್ನು ಹಾಗೂ ಉತ್ತಮ ತಾಂತ್ರಿಕತೆಗಳ ಕುರಿತು ವ್ಯಾಪಕ ಪ್ರಚಾರ ನೀಡಬೇಕು. ಉತ್ತಮ ತಳಿಗಳನ್ನು ಸಹಾಯಧನ ಕಾರ್ಯಕ್ರಮದಡಿ ತರಲು ಕ್ರಮ ಕೈಗೊಳ್ಳಬೇಕು ಎಂದು ಬಿ.ಸಿ.ಪಾಟೀಲ್ ಸೂಚಿಸಿದರು. ಕೃಷಿ,ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ವಿವಿಧ ಕೃಷಿ ತೋಟಗಾರಿಕೆ/ಪಶುಸಂಗೋಪನಾ ವಿಶ್ವವಿದ್ಯಾಲಯ ಹಾಗೂ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳು, ಆಯುಕ್ತರು, ನಿರ್ದೇಶಕರು ಪಂಡಿತ ಪ್ರಶಸ್ತಿ ವಿಜೇತರು ಭಾಗವಹಿಸಿದ್ದರು.



25-02-2022 Vv Pg 02

ರೈತರ ಆದಾಯ ದ್ವಿಗುಣ: ಯೋಜನಾ ವರದಿ ನೀಡಲು ಕೃಷಿ ವಿವಿಗಳಿಗೆ ಸೂಚನೆ



ಬೆಂಗಳೂರು: ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ನೂತನ ಪದ್ಧತಿಗಳು ಮತ್ತು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲು ಮುಂದಾಗಿರುವ ಸರ್ಕಾರ, ಈ ಸಂಬಂಧ ಯೋಜನಾ ವರದಿ ನೀಡುವಂತೆ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಿಗೆ -ಕೃಷಿ ಸಚಿವ ಬಿ.ಸಿ. ಪಾಟೀಲ್ ಸೂಚಿಸಿದ್ದಾರೆ.

ವಿಕಾಸಸೌಧದಲ್ಲಿ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ನಡೆದ ಉನ್ನತಾಧಿಕಾರಿ ಸಮಿತಿಯ ಪರಿಶೀಲನಾ ಸಭೆಯಲ್ಲಿ ಸಚಿವರು ಈ ನಿರ್ದೇಶನ ನೀಡಿದರು.

ಕೃಷಿಯಲ್ಲಿ ಡ್ರೋಣ್ ತಂತ್ರಜ್ಞಾನ ಬಳಕೆ ಸೇರಿ ಕೀಟನಾಶಕ, ಲಘು ಪೋಷ ಕಾಂಶಗಳು ಮತ್ತು ಬೆಳೆ ಪ್ರಚೋದಕಗಳ ಸಿಂಪಡಣೆ, ಬೆಳೆವಾರು ಬಳಕೆ ಕುರಿತು ಸಂಶೋಧನೆ ನಡೆಸಲು ಅನುಕೂಲವಾ ಗುವಂತೆ ನೂತನ ಪದ್ಧತಿಗಳನ್ನು ಅಭಿವೃದ್ಧಿಪಡಿಸಿ, ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲು ಕೃಷಿ ವಿವಿ ವಿಜ್ಞಾನಿಗಳು ಹಾಗೂ ಪ್ರಗತಿಪರ ರೈತರು ಹಾಗೂ ಇಲಾಖೆ ಅಧಿಕಾರಿಗಳು ಮತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಸಚಿವರನ್ನೊಳಗೊಂಡ ತಂಡ ರಚಿಸ ಲಾಗಿದ್ದು, ಕೃಷಿ ವಿವಿಗಳು ಯೋಜನಾ ವರದಿ ನೀಡಬೇಕು ಎಂದು ಹೇಳಿದರು.

ಸಭೆಯಲ್ಲಿ ರೈತರ ಆದಾಯ ದ್ವಿಗುಣಗೊಳಿಸಲು ಸೆಕೆಂಡರಿ ಕೃಷಿಗೆ ಒತ್ತು ನೀಡುವುದರ ಜತೆಗೆ ಸೆಕೆಂಡರಿ ಕೃಷಿ ಕುರಿತು ರಾಜ್ಯದ ಎಲ್ಲಾ ಕೃಷಿ ವಿವಿಗಳಲ್ಲಿರುವ ನೂತನ ತಾಂತ್ರಿಕತೆ ಗಳನ್ನು ಒಂದೇ ಸೂರಿನಡಿ ರೈತರಿಗೆ ಲಭ್ಯವಾಗುವಂತೆ ರೈತರಿಗೆ ಮಾಹಿತಿ ಮತ್ತು ತರಬೇತಿ ನೀಡಲು ತಿಳಿಸಲಾ ಯಿತು. ಹಾಗೂ ಎಲ್ಲಾ ಕೃಷಿ ವಿಶ್ವವಿದ್ಯಾ ಲಯಗಳಲ್ಲಿ ಲಭ್ಯವಿರುವ ರೈತಸ್ನೇಹಿ ಆದಾಯಹೆಚ್ಚಿಸುವಸಂಶೋಧನೆಗಳನ್ನು ತಂತ್ರಾಂಶದಲ್ಲಿ ಅಳವಡಿಸಿ, ಎಲ್ಲರಿಗೂ ಲಭ್ಯವಾಗುವಂತೆ ಮಾಡಬೇಕು. ಇದೇ ವೇಳೆ ಸಭೆಯಲ್ಲಿ ಭಾಗವಹಿಸಿದ್ದ ಕೃಷಿ ಪಂಡಿತ ಪ್ರಶಸ್ತಿ ವಿಜೇತ ರೈತರಿಂದ ಸ್ಥಳೀಯವಾಗಿ ಲಭ್ಯವಿರುವ ವಿವಿಧ ಸೆಕೆಂಡರಿ ಕೃಷಿ ಉದ್ಯಮಗಳ ಕುರಿತು ಮಾಹಿತಿ ಪಡೆಯಲಾಯಿತು.

ಉನ್ನತಾಧಿಕಾರದ ಸಮಿತಿಯಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಿವಿಧ ಕೃಷಿ, ತೋಟಗಾರಿಕೆ, ಪಶುಸಂಗೋಪನಾ ವಿಶ್ವವಿದ್ಯಾಲಯಗಳ ಕುಲಪತಿಗಳು, ಕೃಷಿ ಪಂಡಿತ ಪ್ರಶಸ್ತಿ ವಿಜೇತರು ಉಪಸ್ಥಿತರಿದ್ದರು.

25-02-2022 Uv Pg 06

'Crisis a chance for India to export more wheat'

'18% of global exports are from Russia

PRESS TRUST OF INDIA
NEW DELHI



The Russia-Ukraine crisis might give India an opportunity to export more wheat in the global markets and domestic exporters should tap this opportunity, sources said on Thursday.

India's central pool stood at 24.2 million tonnes, twice more than the buffer and strategic needs, they said.

More than a quarter of the world's wheat export comes from Russia and Ukraine. Russia is the world's largest exporter of wheat, accounting for more than 18% of international exports. In 2019, Russia and Ukraine together exported more than a quarter (25.4%) of the world's wheat. Egypt, Turkey and Bangladesh bought more than half of Russia's wheat, they said.

Egypt is the world's biggest importer of wheat, spending more than $4 billion annually. Russia and Ukraine cover more than 70% of Egypt's imported wheat demand. Turkey is also a big spender with 74% of its imports worth $1.6 billion coming from Russia and Ukraine in 2019.

25-02-2022 Hindu Pg 12

25-02-2022 Vv Pg 04

ಟೊಮ್ಯಾಟೊ ಬೆಲೆ ದಿಢೀರ್ ಕುಸಿತ

ಕೋಲಾರ: ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಕಳೆದ ತಿಂಗಳು ಕೆಜಿ ಟೊಮ್ಯಾಟೊಗೆ 35 ರೂ.ಗಳಿಗೂ ಹೆಚ್ಚಿದ್ದ ಇದ್ದ ದರ ದಿಢೀರ್ ಕುಸಿತ ಕಂಡಿದೆ. ಕೆಜಿಗೆ 3 ರಿಂದ 10 ರೂ.ಗೆ ಮಾರಾಟವಾಗುತ್ತಿದ್ದು, ರೈತರು ಕಂಗಾಲಾ ಗಿದ್ದಾರೆ. 2-3 ತಿಂಗಳ ಹಿಂದೆ 15 ಕೆಜಿ ಟೊಮ್ಯಾಟೊ ಬಾಕ್ಸ್ 1000 ರೂ.ಗೂ ಮೇಲ್ಪಟ್ಟು ಮಾರಾಟವಾಗಿತ್ತು. ಕಳೆದ ತಿಂಗಳು 15 ಕೆಜಿಯ ಬಾಕ್ಸ್ 300-500 ರೂ.ಗೆ ಮಾರಾಟವಾಗುತ್ತಿತ್ತು. ಇದೀಗ ಕೇವಲ 50ರಿಂದ 100 ರೂ.ಗೆ ಮಾರಾಟವಾಗುತ್ತಿದೆ.



25-02-2022 Pv Pg 3B

25-02-2022 Hd Pg 01

ಆಮದು ಬಿಡಿ, ದೇಶೀ ಕೃಷಿ ಉತ್ಪನ್ನ ಖರೀದಿಸಿ

ನೀವೂ ಬೆಳೆಯಿರಿ, ನಿಮ್ಮ ಜೊತೆ ರೈತರನ್ನೂ ಬೆಳೆಸಿ

ಹೊಸದಿಲ್ಲಿ: ಆಮದು ಪ್ರಕ್ರಿಯೆ ಕೈಬಿಟ್ಟು, ಸ್ಥಳೀಯವಾಗಿ ಉತ್ಪಾದಿತ ತೈಲಬೀಜಗಳನ್ನೇ ಖರೀದಿಸುವ ಮೂಲಕ ರೈತರಲ್ಲಿ ಭರವಸೆ ಮೂಡಿಸಿ ಮತ್ತು ಉಭಯತ್ರರಿಗೂ ಸಮಾನ ವಿಜಯದ ಸನ್ನಿವೇಶ ನಿರ್ಮಾಣ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಖಾಸಗಿ ಕಾರ್ಪೊರೇಟ್‌ಗಳಿಗೆ ಕರೆ ನೀಡಿದ್ದಾರೆ.

ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ತೈಲೋತ್ಪಾದನೆಯನ್ನು ಶೇ.50ರಷ್ಟು ಹೆಚ್ಚಿಸುವುದು ಭಾರತದ ಗುರಿ ಮತ್ತು ಇದನ್ನು ನಿಗದಿತ ಕಾಲಮಿತಿಯೊಳಗೆ ಸಾಧಿಸಬೇಕು ಎಂದ ಮೋದಿಜಿ, ರಾಷ್ಟ್ರೀಯ ಖಾದ್ಯತೈಲ ಮಿಷನ್‌ನಡಿ ಪಾಮೆಣ್ಣೆ ಕೃಷಿಯ ವಿಸ್ತರಣೆಗೆ ಪೂರಕ ಕಾರ್ಯಕ್ರಮಕ್ಕೆ ಈಗಾಗಲೆ ಚಾಲನೆ ನೀಡಲಾಗಿದೆ. ಬೆಳೆ ವೈವಿಧ್ಯತೆ ಉತ್ತೇಜಿಸಲು ಹೂಡಿಕೆದಾರರು ಮುಂದೆ ಬರಬೇಕೆಂದರು. ಕೃಷಿರಂಗದ ಮೇಲೆ 2022ರ ಕೇಂದ್ರ ಬಜೆಟ್ ಪರಿಣಾಮ ಕುರಿತ ವೆಬಿನಾರ್‌ನಲ್ಲಿ ಅವರು ಮಾತನಾಡಿದರು. ತೈಲಬೀಜ ಮತ್ತು ದ್ವಿದಳ ಧಾನ್ಯಗಳನ್ನು ಉದಾಹರಿಸಿ, ನಮ್ಮ ದೇಶದಲ್ಲಿ ಇವುಗಳಿಗೆ ತುಂಬು ಬೇಡಿಕೆ ಇದೆ. ಕಾರ್ಪೊರೇಟ್ ಜಗತ್ತು ಈ ನಿಟ್ಟಿನಲ್ಲಿ ಮುಂಬರಬೇಕು, ನಿಮಗಿಲ್ಲಿ ಭರವಸೆಯ ಮಾರುಕಟ್ಟೆಯಿರುವಾಗ ಆಮದಿನ ಅಗತ್ಯವೇನಿದೆ ಎಂದು ಮೋದಿ ಪ್ರಶ್ನಿಸಿದರು. ವ್ಯಾಪಾರಿಗಳು ಎಷ್ಟು ಪ್ರಮಾಣದ ತೈಲಬೀಜ, ದ್ವಿದಳ ಧಾನ್ಯ ಬೇಕೆಂಬುದನ್ನು ರೈತರಿಗೆ ಮುಂದಾಗೇ ತಿಳಿಸಬೇಕು.



ಗಂಗಾತೀರದಲ್ಲಿ ಪ್ರಾಕೃತಿಕ ಕೃಷಿ

ಗಂಗಾ ನದಿ ತೀರದುದ್ದಕ್ಕೂ ಪ್ರಾಕೃತಿಕ ಕೃಷಿಗೆ ಉತ್ತೇಜನ, ಕೃಷಿರಂಗ ಮತ್ತು ತೋಟಗಾರಿಕೆ ರಂಗದಲ್ಲಿ ಆಧುನಿಕ ತಂತ್ರಜ್ಞಾನ ಬಳಕೆ, ಕೃಷಿ ಉತ್ಪನ್ನಗಳ ಸಾಗಣೆಗೆ ಹೊಸ ವಿಧಾನಗಳ ಬಳಕೆ ಮೂಲಕ ಭಾರತೀಯ ಕೃಷಿರಂಗವನ್ನು ಆಧುನಿಕ ಮತ್ತು ಕ್ರಿಯಾಶೀಲಗೊಳಿಸಲು ಆದ್ಯತೆ ನೀಡಲು ತೀರ್ಮಾನಿಸಲಾಗಿದೆ ಎಂದು ಪ್ರಧಾನಿ ಬಜೆಟ್‌ನ್ನು ಉದ್ದರಿಸಿ ವಿಶದಪಡಿಸಿದರು. ಕೃಷಿ ತ್ಯಾಜ್ಯಗಳ ಸಮರ್ಥ ನಿರ್ವಹಣೆ ಮೂಲಕ ಕೃಷಿಕರ ಆದಾಯ ವರ್ಧನೆಗೂ ಆದ್ಯತೆ ನೀಡಲಾಗುವುದು ಎಂದರು.

ಜಲ ದತ್ತಾಂಶ ಸಂಗ್ರಹಕ್ಕಾಗಿ ಪ್ರಯೋಗ ಶಾಲೆ

ಬೆಂಗಳೂರು: ಮೈಸೂರಿನ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರಿಂಗ್ (ಎನ್‌ಐಇ) ಕೊಡಗಿನ ಪುಷ್ಪಗಿರಿ ಬೆಟ್ಟದ ತಪ್ಪಲಿನಲ್ಲಿ 'ಕ್ಷೇತ್ರ ಜಲವಿಜ್ಞಾನ ಪ್ರಯೋಗ ಶಾಲೆ'ಯನ್ನು ಸ್ಥಾಪಿಸಿದೆ.

ಮುಖ್ಯವಾಗಿ, ಮಳೆಯ ತೀವ್ರತೆ, ಒಳ ಹರಿವು, ಅಂತರ್ಜಲ ಇತ್ಯಾದಿಗಳ ಬಗ್ಗೆ ನಿಖರ ಮಾಹಿತಿ ಸಂಗ್ರಹಿಸಿ ದತ್ತಾಂಶ ಸಿದ್ಧಪಡಿಸುವುದು ಈ ಪ್ರಯೋಗ ಶಾಲೆಯ ಮುಖ್ಯ ಉದ್ದೇಶ. ಜಲ ವಿಜ್ಞಾನದ ಮೂಲಭೂತ ಸಂಶೋಧನೆಯು ಜಲಾನಯನ ಕ್ಷೇತ್ರ-ಗಳಲ್ಲೇ ಅಳವಡಿಸಿಕೊಂಡು ಅಧ್ಯಯನ ನಡೆಸಲು ತಜ್ಞರಿಗೆ ಈ ವ್ಯವಸ್ಥೆ ಸಹಕಾರಿಯಾಗಲಿದೆ ಎಂದು ಎನ್‌ಐಇಯ ಜಲಸಂಪನ್ಮೂಲ ಕೇಂದ್ರದ ಮುಖ್ಯಸ್ಥ ಯದುಪತಿ ಪುಟ್ಟ ತಿಳಿಸಿದ್ದಾರೆ.

ವಿಜ್ಞಾನಿಗಳು ಸ್ವತಃ ಜಲಾನಯನ ಪ್ರದೇಶದಲ್ಲಿ ಸೌಲಭ್ಯಗಳನ್ನು ನಿರ್ಮಿಸಿಕೊಂಡು ಅಲೆದಾಡಿ ಕೆಲಸ ಮಾಡುವುದು ಕಷ್ಟ. ಅತಿಯಾದ ಮಳೆ, ಕ್ಲೀಷ್ಟವಾದ ಪ್ರದೇಶ, ಕಾಡು-ಮೇಡುಗಳಿಂದಾಗಿ ಅಧ್ಯಯನ ನಡೆಸುವುದು ಸವಾಲಿನ ಕೆಲಸವಾಗಿದೆ. ಹೀಗಾಗಿ ನಾಲ್ಕು ಗೋಡೆಗಳ ಮಧ್ಯೆ ಕುಳಿತು ಕಂಪ್ಯೂಟರ್ ಬಳಸಿ ನಡೆಸಬಹುದಾದ ಅಧ್ಯಯನಗಳೇ ಹೆಚ್ಚುತ್ತಿವೆ ಎಂದಿದ್ದಾರೆ.

ಎನ್‌ಐಇಯ ಸಿವಿಲ್ ಎಂಜಿನಿಯರಿಂಗ್ ವಿಭಾಗವು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಇಸ್ರೊ ಮತ್ತು ಕೇಂದ್ರ ಸರ್ಕಾರದ ಭೂವಿಜ್ಞಾನ ಇಲಾಖೆಯ ಅನುದಾನ ಮೂಲಕ ಕಳೆದ ಮೂರು ದಶಕಗಳಿಂದ ಕೊಡಗಿನ ಮತ್ತು ಹಾಸನ ಜಿಲ್ಲೆಯ ತೀವ್ರ ಮಳೆ ಬೀಳುವ ಜಲಾನಯನ ಪ್ರದೇಶಗಳಲ್ಲಿ ಪ್ರಾಯೋಗಿಕ ಇಳಿಮೇಡುಗ



ಜಲ ಮಾಪಕ

ಳನ್ನು ನಿರ್ಮಿಸಿ ಸಂಶೋಧನೆ ನಡೆಸುತ್ತಾ ಬಂದಿದೆ. ವಿಶ್ವಬ್ಯಾಂಕ್ ನೆರವಿನ ಮೂಲಕ ನದಿ ಹರಿವಿನ ಮಾಪನ ಸ್ಥಳಗಳನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಇಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಇಲ್ಲಿ ನಡೆದ ಸಾಕಷ್ಟು ಅಧ್ಯಯನಗಳ ಲೇಖನಗಳು ಅಂತರರಾಷ್ಟ್ರೀಯ ವಿಜ್ಞಾನದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪಶ್ಚಿಮ ಘಟ್ಟಗಳ ಮಳೆ ಮತ್ತು ನದಿ ಹರಿವಿನ ಬಗ್ಗೆ ಸಾಕಷ್ಟು ಹೊಸ ವಿಷಯಗಳು ಬೆಳಕಿಗೆ ಬಂದಿವೆ. ಇಲ್ಲಿನ ನದಿ ಹರಿವು ಮೈದಾನ ಪ್ರದೇಶದಲ್ಲಿ ಕಂಡು ಬರುವ ನೆಲದ ಮೇಲಿನ ಹರಿವಿಗಿಂತ ಭಿನ್ನವಾಗಿದೆ ಎನ್ನುತ್ತಾರೆ ಯದುಪತಿ ಪುಟ್ಟ.

ನೆಲದೊಳಗಿನ ನೀರಿನ ಹರಿವು ಆಳವಾದ ಮಣ್ಣಿನ ಪದರದಲ್ಲಿ ಸ್ವಾಭಾವಿಕವಾಗಿ ನಿರ್ಮಿತವಾದ ಕೊಳವೆಗಳಲ್ಲಿ ಆಗುವುದು ಎಂಬುದು ಸಾಬೀತಾಗಿದೆ. ಪಶ್ಚಿಮಘಟ್ಟದಲ್ಲಿ ಗುಪ್ತಗಾಮಿನಿಗಳು ವಾಸ್ತವ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ ಎಂದು ಹೇಳಿದರು.

For more information visit
University Library Website
Web - uasbagrilibindia.org
E-mail- librarian@uasbangalore.edu.in

ನೀವೂ ಬೆಳೆಯಿರಿ, ನಿಮ್ಮ ಜೊತೆ ರೈತರನ್ನೂ ಬೆಳೆಸಿ: ಮೋದಿ

೧೪ಇನ್ನು ಬೆಳೆನಷ್ಟದ ವಿರುದ್ಧ ಕೃಷಿ ವಿಮಾ ವ್ಯವಸ್ಥೆ ಈಗಾಗಲೆ ಜಾರಿಯಲ್ಲಿದೆ ಎಂದು ಮೋದಿ ವಿವರಿಸಿದರು.

ಆಹಾರ ವಸ್ತುಗಳು ಇಲ್ಲೇ ತಯಾರಾಗಲಿ: ನಮಗೆ ಯಾವೆಲ್ಲ ಆಹಾರ ವಸ್ತುಗಳ ಅಗತ್ಯವಿದೆಯೋ ಅವೆಲ್ಲವೂ ಭಾರತದಲ್ಲೇ ತಯಾರಾಗಲು ನಾವೆಲ್ಲ ಒಟ್ಟಾಗಿ ಶ್ರಮಿಸಬೇಕೆಂದ ಪ್ರಧಾನಿ, ಪ್ರಸಕ್ತ ತನ್ನ ಖಾದ್ಯತೈಲ ಆವಶ್ಯಕತೆಯ ಪೈಕಿ ಶೇ.60-65ನ್ನು ಭಾರತ ಆಮದು ಮಾಡುತ್ತಿದೆ. ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿದ ಪರಿಣಾಮ, ಅಕ್ಟೋಬರ್‌ಗೆ ಅಂತ್ಯಗೊಳ್ಳುವ 2020-21ರ ವರ್ಷದಲ್ಲಿ ಖಾದ್ಯ ತೈಲ ಆಮದು ಬಿಲ್1.17ಲಕ್ಷ ಕೋಟಿ ರೂಗಳಿಗೆ ನೆಗೆದಿದೆ. ಇದು ಹಿಂದಿನ ವರ್ಷ 72ಸಾವಿರ ಕೋಟಿ ರೂಗಳಷ್ಟಿತ್ತು ಎಂದರು.

2023 ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ: ಅತ್ಯಧಿಕ ಪೌಷ್ಟಿಕಾಂಶಕ್ಕೆ ಹೆಸರಾಂತ ರಾಗಿ , ನವಣೆ ಇತ್ಯಾದಿ ಸಿರಿಧಾನ್ಯಗಳ ಬ್ರಾಂಡಿಂಗ್ ಮತ್ತು ಅಭಿವೃದ್ಧಿಗೆ ಭಾರತೀಯ ಉದ್ದಿಮೆಗಳು ನೆರವಾಗಬೇಕು ಎಂದು ಕರೆಯಿತ್ತ ಮೋದಿಜಿ, 2023ನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಘೋಷಿಸಲಾಗಿದೆ ಎಂದರು. ಗೇಮ್ ಚೇಂಜರ್ ಆಗುತ್ತಿರುವ ನ್ಯಾನೋ ರಸಗೊಬ್ಬರ ರಂಗ, ಆಹಾರ ಸಂಸ್ಕರಣೆ ಮತ್ತು ಇಥನಾಲ್ ಉತ್ಪಾದನಾ ರಂಗದಲ್ಲೂ ಕಾರ್ಪೊರೇಟ್ ಜಗತ್ತಿಗೆ ಧಾರಾಳ ಅವಕಾಶಗಳಿವೆ ಎಂದು ವಿವರಿಸಿದರು.

ಮಣ್ಣು ಪರೀಕ್ಷೆ : ನೆಟ್‌ವರ್ಕ್‌ಗೆ ಸಲಹೆ: ರೈತರು ನಿಯತ ನೆಲೆಯಲ್ಲಿ ತಮ್ಮ ಕೃಷಿ ಭೂಮಿಯ ಮಣ್ಣು ಪರೀಕ್ಷೆ ನಡೆಸಬೇಕಾದ ಅಗತ್ಯ ಮತ್ತು ಮಹತ್ತ್ವದ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಬೇಕು.ಮಣ್ಣು ಪರೀಕ್ಷಾ ಲ್ಯಾಬ್‌ಗಳ ಪಾನ್-ಇಂಡಿಯಾ ನೆಟ್‌ವರ್ಕ್‌ನ್ನು ರೂಪಿಸುವಂತೆ ಪ್ರಧಾನಿ ಮೋದಿಜಿ ಸ್ಟಾರ್ಟಪ್‌ಗಳು ಮತ್ತು ಖಾಸಗಿ ಹೂಡಿಕೆದಾರರಿಗೆ ಸಲಹೆ ಮಾಡಿದರು.

2022ರ ಬಜೆಟ್‌ನಲ್ಲಿ ಭಾರತೀಯ ಕೃಷಿರಂಗದ ಆಧುನೀಕತೆ ಮತ್ತು ಸ್ಟಾರ್ಟ್‌ನೆಸ್‌ಗೆ ಆದ್ಯತೆ ನೀಡಲಾಗಿದೆ. 21ನೇ ಶತಮಾನದಲ್ಲಿ ಕೃತಕ ಬುದ್ಧಿಮತ್ತೆಯು ಕೃಷಿ ರಂಗ ಮತ್ತು ಕೃಷಿ ಆಧಾರಿತ ವ್ಯಾಪಾರ ರಂಗದಲ್ಲಿ ಸಂಪೂರ್ಣ ಪರಿವರ್ತನೆ ಸೃಜಿಸಲಿದೆ ಎಂದರು ಮೋದಿ.

ಸ್ವಾಭಾವಿಕ ,ಜೈವಿಕ ಕೃಷಿ ಬಗ್ಗೆ ಜಾಗೃತಿಗೆ ಕರೆ: ಕಚ್ಚಾವಸ್ತುಗಳ ವೆಚ್ಚ ಕಡಿಮೆ ಮಾಡಿ ರೈತರ ಆದಾಯ ಹೆಚ್ಚಿಸುವುದು ಮತ್ತು ರೈತರಿಗೆ ಆಧುನಿಕ ಸೌಲಭ್ಯ ಕಲ್ಪಿಸುವುದು ಸರಕಾರದ ಆಶಯ. ರೈತರಿಗೆ ಬಾಡಿಗೆ ನೆಲೆಯಲ್ಲಿ ಅಗತ್ಯ ಎಲ್ಲಾ ಉಪಕರಣಗಳನ್ನು ಕಲ್ಪಿಸುವ ವ್ಯವಸ್ಥೆಯೊಂದನ್ನು ರೂಪಿಸುವಂತೆ ಪ್ರಧಾನಿ ಕಾರ್ಪೊರೇಟ್‌ಗಳಿಗೆ ಸಲಹೆಯಿತ್ತರು. ಸ್ವಾಭಾವಿಕ ಮತ್ತು ಜೈವಿಕ ಕೃಷಿ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಪ್ರಯತ್ನ ಶೀಲರಾಗುವಂತೆ ಕೃಷಿ ವಿವಿಗಳು ಮತ್ತು ಕೃಷಿ ವಿಜ್ಞಾನಿಗಳಿಗೆ ಸಲಹೆ ಮಾಡಿದರು.

ರೈತರಿಗೆ ಬಲ ನೀಡಿದ ಪಿಎಂ ಕಿಸಾನ್ ಸಮ್ಮಾನ್: ಕೃಷಿರಂಗದಲ್ಲಿ ಬೀಜದಿಂದಾರಂಭಿಸಿ ಮಾರುಕಟ್ಟೆವರೆಗೆ ಹಲವು ಹೊಸ ವ್ಯವಸ್ಥೆಗಳನ್ನು ನಮ್ಮ ಸರಕಾರ ಕಳೆದ ಏಳು ವರ್ಷಗಳಲ್ಲಿ ಜಾರಿಗೊಳಿಸಿದೆ, ಹಳೆ ವ್ಯವಸ್ಥೆಗಳನ್ನು ಸುಧಾರಿಸಿದೆ. ಆರು ವರ್ಷಗಳಲ್ಲಿ ಕೃಷಿ ಬಜೆಟ್ ಮೊತ್ತವನ್ನು ಬಹುಪಟ್ಟು ಹೆಚ್ಚಿಸಲಾಗಿದೆ. 7ವರ್ಷಗಳಲ್ಲಿ ಕೃಷಿ ಸಾಲಗಳನ್ನು 2.5ಪಟ್ಟು ವಿಸ್ತರಿಸಲಾಗಿದೆ. ದೇಶದ ಸಣ್ಣ ಕೃಷಿಕರ ಪಾಲಿಗೆ ಪಿಎಂ ಕಿಸಾನ್ ಸಮ್ಮಾನ್ ನಿಧಿ ಸ್ಕೀಮ್ ಬಲವಾದ ಬೆಂಬಲವಾಗಿ ಪರಿಣಮಿಸಿದೆ ಎಂದರು.

ದಾಖಲೆಯ ಧಾನ್ಯೋತ್ಪಾದನೆ: ಈ ಸ್ಕೀಮ್‌ನಡಿ 11ಕೋಟಿ ರೈತರಿಗೆ 1.75ಲಕ್ಷ ಕೋಟಿ ಮೊತ್ತವನ್ನು ನೀಡಲಾಗಿದೆ. ಈ ಸ್ಕೀಮ್‌ನಡಿ ಕೇಂದ್ರವು ರೈತರಿಗೆ ವಾರ್ಷಿಕ ತಲಾ 6ಸಾವಿರ ರೂಗಳನ್ನು ಮೂರು ಕಂತುಗಳಲ್ಲಾಗಿ ಪಾವತಿಸುತ್ತಿದೆ. ಕೋವಿಡ್ ಸಂದರ್ಭ ವಿಶೇಷ ಅಭಿಯಾನ ರೂಪದಲ್ಲಿ 3ಕೋಟಿ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಸಣ್ಣ ರೈತರಿಗೆ ತುಂಬು ಪ್ರಯೋಜನವಾಗಲು ಕಿರು ನೀರಾವರಿ ಜಾಲವನ್ನು ಬಲಪಡಿಸಲಾಗಿದೆ. ಸರಕಾರದ ಈ ಪ್ರಯತ್ನಗಳ ಪರಿಣಾಮ ರೈತರು ದಾಖಲೆಯ ಆಹಾರ ಧಾನ್ಯಗಳನ್ನು ಉತ್ಪಾದಿಸಿದರು ಮಾತ್ರವಲ್ಲ ಎಂಎಸ್‌ಪಿ ಖರೀದಿಗಳಲ್ಲೂ ಹೊಸ ದಾಖಲೆಗಳಾಗಿವೆ. ಜೈವಿಕ ಕೃಷಿಗೆ ಸರಕಾರದ ತುಂಬು ಉತ್ತೇಜನವಿದೆ ಎಂದು ವಿವರಿಸಿದರು.

Indian tea exporters fret over uncertainty due to war

'India ships 40 mn kg a year to Russia, 15 mn kg to Ukraine'

M. SOUNDARIYA PREETHA
COIMBATORE

The Indian tea industry is facing uncertainty after war broke out between Russia and Ukraine on Thursday.

United Planters Association of Southern India president M.P. Cherian said Russia was a significant market for Indian teas. Of the 145 million kg in annual tea imports by Russia, 40 million kg is from India. Close to 45% of this is from South India, he said.

"We need to wait and see how the situation evolves. Tea exports saw a decline in 2021. As against 189.8 million kg exported totally between January and November 2020, it was 175.3 million kg



in 2021. Ukraine is also a major importer of Indian tea. If tea exports to these two countries are affected, it will have an impact on the Indian tea sector," he said.

Dipak Shah, chairman of South India Tea Exporters Association, said India exports close to 15 million kg to Ukraine. With the Russian invasion, exports to Ukraine are facing a problem, Mr. Shah said.

Sanctions by western nations on Russia are not likely to affect small businesses.

Exports to Russia are of two types - one based on rupee payments and the other on dollar payments. While there will be no issues with rupee payments, dollar payments may face problems, he said. "However, these are all assumptions of the trade," he said.

Some foreign banks here have already said they would not accept export documents to these two countries. If the trend spreads to other banks, tea exports will face challenges, he said.

25-02-2022
Hindu Pg 12

ಅಪ್ರತಿಮ ಕೃಷಿ ವಿಜ್ಞಾನಿ

ಫೆ. 25 ರಂದು ಧಾರವಾಡದ ಕೃಷಿ ವಿಶ್ವವಿದ್ಯಾಲಯವು ಡಾ. ಎಸ್. ವಿ. ಪಾಟೀಲರ ಶತಮಾನೋತ್ಸವವನ್ನು ಬೆಳಿಗ್ಗೆ 10 ಗಂಟೆಗೆ ಆಚರಿಸುತ್ತಿದೆ.

ಓರ್ವ ಪರಿಪೂರ್ಣ ವ್ಯಕ್ತಿತ್ವದಲ್ಲಿ ರೂಪುಗೊಂಡ ವಿಜ್ಞಾನಿಗಳ ಪಟ್ಟಿಯಲ್ಲಿ ರಾಜ್ಯದ ಬೆಂಗಳೂರ ಕೃಷಿ ವಿಶ್ವವಿದ್ಯಾಲಯದ ಹಿಂದಿನ ಕುಲಪತಿ ಡಾ.ಎಸ್.ವಿ. ಪಾಟೀಲರ ಹೆಸರು ಎದ್ದು ಕಾಣುವಂತಹದ್ದು. ಧಾರವಾಡ ಕೃಷಿ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆ ಆರಂಭಿಸಿದ್ದರು. ಆಗ ಡಾ. ಎಚ್.ಆರ್. ಅರಕೇರಿ ಹಾಗೂ ಡಾ. ಎಂ.ಬಿ.ತಿಪ್ಪಣ್ಣವರ ಅವರು ಬೇಸಾಯಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿದ್ದರು. ಇವರೆಲ್ಲರ ನಿರಂತರ ಪರಿಶ್ರಮದಿಂದ (1947-61) 12 ವರ್ಷದಲ್ಲಿ ಕಾಲೇಜಿನ ಫಾರ್ಮ್ ಲೇಔಟ್ ಕಾರ್ಯವನ್ನೂ ಅತ್ಯುತ್ತಮವಾಗಿ ನಿರ್ಮಿಸಿದರು. ಅಲ್ಲಿ ಉತ್ತರ ಕರ್ನಾಟಕದ ಎಲ್ಲಾ (300 ಹೆಕ್ಟೇರು) ಬೆಳೆ, ತಳಿ, ಬೆಳೆ ಪದ್ಧತಿ, ಅನುಸರಿಸುವಂಥ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡರು. ಆಗಿನಿಂದಲೇ ಧಾರವಾಡದ ಕೃಷಿ ಮೇಳ ಆರಂಭಿಸಿ ಜನಪ್ರಿಯಗೊಳಿಸಿದರು. ಶಿವನಗೌಡರು ಅಜ್ಜ ಅಜ್ಜಿಯ ಊರು ಹೊನಮಾಗನಹಳ್ಳಿ (ಜಮಖಂಡಿ ತಾಲೂಕು ಅಂದಿನ ವಿಜಾಪೂರ ಜಿಲ್ಲೆ) ಯಲ್ಲಿ 25 ಫೆಬ್ರುವರಿ 1922ರಲ್ಲಿ ಜನ್ಮ ತಾಳಿದರು. ಹಳ್ಳಿಯ ಗೌಡರಿಗೆ 400 ಎಕರೆಗಿಂತಲೂ ಅಧಿಕ ಜಮೀನು ಇದ್ದ ದಿನಗಳಲ್ಲಿ ಉನ್ನತ ಶಿಕ್ಷಣ ಪಡೆದು ಮುಂಬಯಿ ರಾಜ್ಯ ಸರಕಾರದ ಸ್ಕಾಲರ್‌ಶಿಪ್ ಪಡೆದಿದ್ದರು. ಏಳೆಂಟು ವರುಷ ಮುಂಬಯಿ ಕರ್ನಾಟಕದ ವಿಜ್ಞಾನ ಕೇಂದ್ರಗಳಲ್ಲಿ ಬಟಾಟೆ ಸಂಶೋಧನಾ ಕೇಂದ್ರ ಪುಣೆ, ಸಿಮ್ಲಾ, ಫರೂಕಾಬಾದ್ ಹಾಗೂ ಪಡೆಗಾಂವ, ಕಬ್ಬು ಸಂಶೋಧನಾ ಕೇಂದ್ರದಲ್ಲೂ ಸೇವೆ ಸಲ್ಲಿಸಿದ್ದರು.



ವಿದೇಶ ವ್ಯಾಸಂಗ

1961 ರಲ್ಲಿ ಇಂಗ್ಲಂಡಿನ ರೋಥಮ್‌ಸ್ಟೆಡ್ ಎಕ್ಸಪರಿಮೆಂಟಲ್ ಸ್ಟೇಶನ್ ಭೇಟಿ, ಅಮೇರಿಕೆಯ ಕ್ಯಾಲಿಫೋರ್ನಿಯಾ, ಓರೆಗಾಂವ, ಕೊಲೆರೈಡೊ, ಐಯೋವಾ, ಮಿಚಿಗನ್, ಫರ್ಡ್ಯೂ, ಇಲಿನಾಯಿಸ್, ಆರ್ಬಾನಾ, ಮೇರಿಲ್ಯಾಂಡ್‌ಗಳಿಗೆ ಭೇಟಿ ನೀಡಿ ಅಲ್ಲಿಯ ಕೃಷಿ ಸಂಶೋಧನೆಗಳನ್ನು ಆಳವಾಗಿ ಅಭ್ಯಸಿಸಿದ್ದರು. ಜಪಾನ್ (1963)ನ ಕ್ಯೂಟೊ, ಟೋಕಿಯೋ ಸಂಸ್ಥೆಗಳಿಗೆ ಭೇಟಿ, ಇಷ್ಟಲ್ಲದೇ ಕ್ಯೂಬಾದ ಅಗ್ರಿ ಇನ್‌ಸ್ಟಿಟ್ಯೂಟ್‌ಗೆ ಭೇಟಿ, ಫಿಲಿಪ್ಪೈನ್ಸನ ಭತ್ತ ಸಂಶೋಧನಾ ಸಂಸ್ಥೆ, ಹೀಗೆಯೇ ವಿವಿಧ ದೇಶಗಳಲ್ಲಿಯ ಕೃಷಿ ಸಂಶೋಧನೆ ಹಾಗೂ ಅಧ್ಯಯನಗಳ ಬಗ್ಗೆ ತುಂಬಾ ಆಸಕ್ತಿಯಿಂದ ಭೇಟಿ ನೀಡಿ ಬಂದು, ಸರಕಾರಕ್ಕೆ ಸುದೀರ್ಘ ವರದಿ ನೀಡಿದರು. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವರ್ಲ್ಡ್ ಅಗ್ರಿಕಲ್ಚರ್ ಕೋರ್ಸ್ ರೂಪಿಸಿ, ಎಲ್ಲ ವಿದ್ಯಾರ್ಥಿಗಳಿಗಾಗಿ ವಿವಿಧ ದೇಶಗಳಲ್ಲಿಯ ಕೃಷಿ, ಕೃಷಿ ಉಪ ಉದ್ದಿಮೆಗಳ ಬಗ್ಗೆ ಪಠ್ಯಕ್ರಮ ಸಿದ್ಧಪಡಿಸಿದ್ದರು.

1987 ರಲ್ಲಿ ಸೇವಾವಧಿಯ ನಂತರ ತಿಂಗಳಿಗೊಮ್ಮೆ ಧಾರವಾಡದ ಗ್ರಾಮಸೇವಕ ತರಬೇತಿ ಕೇಂದ್ರದ ಬದಿಯಲ್ಲಿರುವ, ತಾವೇ 1981ರಲ್ಲಿ ಸ್ಥಾಪಿಸಿದ ಕೃಷಿ ಹಾಗೂ ಗ್ರಾಮಾಭಿವೃದ್ಧಿ ಅಧ್ಯಯನ ಸಂಸ್ಥೆ (ಇಸಾರ್ಡ್)ಗೆ ಭೇಟಿ ನೀಡುತ್ತಿದ್ದರು. ಆ ಕೇಂದ್ರದ ಅಧ್ಯಕ್ಷರಾಗಿಯೂ ಕಾರ್ಯಸೇವೆಯಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರು.

■ ಪ್ರೊ ವಿಜಯಕುಮಾರ ಗಿಡ್ನವರ

25-02-2022
Sk Pg 08

ಜಲ ದತ್ತಾಂಶ ಸಂಗ್ರಹಕ್ಕಾಗಿ ಪ್ರಯೋಗ ಶಾಲೆ

ಬೆಂಗಳೂರು: ಮೈಸೂರಿನ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರಿಂಗ್ (ಎನ್‌ಐಇ) ಕೊಡಗಿನ ಪುಷ್ಪಗಿರಿ ಬೆಟ್ಟದ ತಪ್ಪಲಿನಲ್ಲಿ 'ಕ್ಷೇತ್ರ ಜಲವಿಜ್ಞಾನ ಪ್ರಯೋಗ ಶಾಲೆ'ಯನ್ನು ಸ್ಥಾಪಿಸಿದೆ.

ಮುಖ್ಯವಾಗಿ, ಮಳೆಯ ತೀವ್ರತೆ, ಒಳ ಹರಿವು, ಅಂತರ್ಜಲ ಇತ್ಯಾದಿಗಳ ಬಗ್ಗೆ ನಿಖರ ಮಾಹಿತಿ ಸಂಗ್ರಹಿಸಿ ದತ್ತಾಂಶ ಸಿದ್ಧಪಡಿಸುವುದು ಈ ಪ್ರಯೋಗ ಶಾಲೆಯ ಮುಖ್ಯ ಉದ್ದೇಶ. ಜಲ ವಿಜ್ಞಾನದ ಮೂಲಭೂತ ಸಂಶೋಧನೆಯು ಜಲಾನಯನ ಕ್ಷೇತ್ರ-ಗಳಲ್ಲೇ ಅಳವಡಿಸಿಕೊಂಡು ಅಧ್ಯಯನ ನಡೆಸಲು ತಜ್ಞರಿಗೆ ಈ ವ್ಯವಸ್ಥೆ ಸಹಕಾರಿಯಾಗಲಿದೆ ಎಂದು ಎನ್ ಐಇಯ ಜಲಸಂಪನ್ಮೂಲ ಕೇಂದ್ರದ ಮುಖ್ಯಸ್ಥ ಯದುಪತಿ ಪುಟ್ಟಿ ತಿಳಿಸಿದ್ದಾರೆ.

ವಿಜ್ಞಾನಿಗಳು ಸ್ವತಃ ಜಲಾನಯನ ಪ್ರದೇಶದಲ್ಲಿ ಸೌಲಭ್ಯಗಳನ್ನು ನಿರ್ಮಿಸಿಕೊಂಡು ಅಲೆದಾಡಿ ಕೆಲಸ ಮಾಡುವುದು ಕಷ್ಟ. ಅತಿಯಾದ ಮಳೆ, ಕ್ಲೀಷ್ಟವಾದ ಪ್ರದೇಶ, ಕಾಡು-ಮೇಡುಗಳಿಂದಾಗಿ ಅಧ್ಯಯನ ನಡೆಸುವುದು ಸವಾಲಿನ ಕೆಲಸವಾಗಿದೆ. ಹೀಗಾಗಿ ನಾಲ್ಕು ಗೋಡೆಗಳ ಮಧ್ಯೆ ಕುಳಿತು ಕಂಪ್ಯೂಟರ್ ಬಳಸಿ ನಡೆಸಬಹುದಾದ ಅಧ್ಯಯನಗಳೇ ಹೆಚ್ಚುತ್ತಿವೆ ಎಂದಿದ್ದಾರೆ.

ಎನ್‌ಐಇಯ ಸಿವಿಲ್ ಎಂಜಿನಿಯರಿಂಗ್ ವಿಭಾಗವು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಇಸ್ರೊ ಮತ್ತು ಕೇಂದ್ರ ಸರ್ಕಾರದ ಭೂವಿಜ್ಞಾನ ಇಲಾಖೆಯ ಅನುದಾನ ಮೂಲಕ ಕಳೆದ ಮೂರು ದಶಕಗಳಿಂದ ಕೊಡಗಿನ ಮತ್ತು ಹಾಸನ ಜಿಲ್ಲೆಯ ತೀವ್ರ ಮಳೆ ಬೀಳುವ ಜಲಾನಯನ ಪ್ರದೇ-ಶಗಳಲ್ಲಿ ಪ್ರಾಯೋಗಿಕ ಇಳಿಮೇಡುಗ



ಜಲ ಮಾಪಕ

ಳನ್ನು ನಿರ್ಮಿಸಿ ಸಂಶೋಧನೆ ನಡೆಸುತ್ತಾ ಬಂದಿದೆ. ವಿಶ್ವಬ್ಯಾಂಕ್ ನೆರವಿನ ಮೂಲಕ ನದಿ ಹರಿವಿನ ಮಾಪನ ಸ್ಥಳಗ ಳನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಇಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಇಲ್ಲಿ ನಡೆದ ಸಾಕಷ್ಟು ಅಧ್ಯಯನಗಳ ಲೇಖನಗಳು ಅಂತ-ರರಾಷ್ಟ್ರೀಯ ವಿಜ್ಞಾನದ ಪತ್ರಿಕೆಗಳ-ಲ್ಲಿ ಪ್ರಕಟವಾಗಿವೆ. ಪಶ್ಚಿಮ ಘಟ್ಟಗಳ ಮಳೆ ಮತ್ತು ನದಿ ಹರಿವಿನ ಬಗ್ಗೆ ಸಾಕಷ್ಟು ಹೊಸ ವಿಷಯಗಳು ಬೆಳಕಿಗೆ ಬಂದಿವೆ. ಇಲ್ಲಿನ ನದಿ ಹರಿವು ಮೈದಾನ ಪ್ರದೇಶದಲ್ಲಿ ಕಂಡು ಬರುವ ನೆಲದ ಮೇಲಿನ ಹರಿವಿಗಿಂತ ಭಿನ್ನವಾಗಿದೆ ಎನ್ನುತ್ತಾರೆ ಯದುಪತಿ ಪುಟ್ಟಿ.

ನೆಲದೊಳಗಿನ ನೀರಿನ ಹರಿವು ಆಳವಾದ ಮಣ್ಣಿನ ಪದರದಲ್ಲಿ ಸ್ವಾಭಾವಿಕವಾಗಿ ನಿರ್ಮಿತವಾದ ಕೊಳವೆಗಳಲ್ಲಿ ಆಗುವುದು ಎಂಬುದು ಸಾಬೀತಾಗಿದೆ. ಪಶ್ಚಿಮಘಟ್ಟದಲ್ಲಿ ಗುಪ್ತ-ಗಾಮಿನಿಗಳು ವಾಸ್ತವ ಎಂದು ಅಧ್ಯ-ಯನಗಳಿಂದ ತಿಳಿದು ಬಂದಿದೆ ಎಂದು ಹೇಳಿದರು.